ಸಿಟ್ಟು ಹತ್ತಿ, ಹೆಂಡತಿಗೆ ಏಟು ಹಾಕಿ, 'ನೀನೇ ಎಲ್ಲೋ ಬಚ್ಚಿಟ್ಟುಕೊಳ್ಳಲು ಹೇಳಿರುವೆ. ಬರಲಿ, ಕತ್ತು ಹಿಡಿದು ಊರಾಚೆ ತಳ್ಳುತ್ತೇನೆ' ಎಂದ. ಈ ಸುದ್ದಿ ಕಿವಿಗೆ ಬಿದ್ದು ಪಳನಿ, ಹಾಗೆ ಕತ್ತು ಹಿಡಿದು ಆಚೆ ತಳ್ಳುತ್ತೇನೆ ಎಂಬ ಮಾತನ್ನು ಆಶೀರ್ವಾದ ಎಂದು ತಿಳಿದು ಕಣ್ಣಾಸೆಲ್ವಿಯೊಡನೆ ಕೋಯಂಬೀಡು ಬಿಟ್ಟು ಮದರಾಸು ಬಸ್ಸು ಹತ್ತಿಯೇಬಿಡುವೆನೆಂದು ಬೆದರಿಕೆಯ ಸುದ್ದಿ ಬಿಟ್ಟ.

ಆಗ ತಿರುಮೊಳಿಯೂ, ಕನ್ನಗಿಯೂ ಇಬ್ಬರೇ ಕಲ್ಯಾಣದ ತೀರ್ಮಾನ ತೆಗೆದುಕೊಂಡರು. ಕಣ್ಣಾಸೆಲ್ವಿಯ ಅಪ್ಪ ಡ್ರೈವರ್ ತಂಗಮಣಿಗೆ ಈ ಸಮಾಚಾರವು ಕಿವಿಗೆ ಬಿದ್ದು ಅರೇ ಮಗಳೇ ತನ್ನ ಗಂಡನನ್ನು ಹುಡುಕಿಕೊಂಡಳಲ್ಲ ಎಂದು ಸಂತೋಷವಾದರೆ, ಅತ್ತ ಕನ್ನಗಿ ಗಂಡನಿಗೆ, ಮದುವೆಯ ಹಿಂದಿನ ದಿನ, 'ನೀ ಕಲ್ಯಾಣತ್ತುಕ್ಕು ವಂದಾ ವಾ, ಇಲ್ಲಾ ಚರಂಡಿ ಮೇಲೇಯೇ ಸಾಗಪ್ಪೋ' ಎಂದುಬಿಟ್ಟಳು. ಅಲ್ಲಿವರೆಗೆ ಮಗನ ಪ್ರೇಮ ವಿಚಾರದಲ್ಲಿ ಕೈಗೆ ಸದರವಾಗಿ ಸಿಗುತ್ತಿದ್ದ ಹೆಂಡತಿಗೆ ಹೊಡೆದು, ಹೊಡೆದು ಸಾಕಾಗಿದ್ದ ಮಂಗೈ ಮೇಸ್ತ್ರಿ, 'ನಾ, ವರುವೆ. ಆದರೆ ಅಲ್ಲಿ ನನಗೆ ಹೆಣ್ಣಿನ ಕಡೆಯವರಿಂದ ಸಿಕ್ಕಬೇಕಾದಷ್ಟು ಮರ್ಯಾದೆ ಸಿಕ್ಕಲಿಲ್ಲವೆಂದರೆ ಕ್ಷಣ ಮಾತ್ರದಲ್ಲಿ ವಾಪಸು ಬರುವಂಥವನೆ ಸೈ' ಎಂಬ ಕಂಡೀಷನ್ ಹಾಕಿದ.

ಮದುವೆಯ ದಿನ ಮಂಗೈಗೆ ಮರ್ಯಾದೆ ಹೋದದ್ದು ಚರಂಡಿ ಶುದ್ಧಿಗೈಯುತ್ತಿದ್ದ ಅವನ ಸ್ವಂತ ಆಳುಗಳಿಂದಲೇ!

★★★

ವಿವಾಹ ಮುಹೂರ್ತದ ದಿನ ಕಣ್ಣಾಸೆಲ್ವಿಯ ಅಪ್ಪ ತಂಗಮಣಿ ಘಳಿಗೆಗೊಮ್ಮೆ ನಿಂತವರಿಗೆಲ್ಲ, ಸ್ಮಶಾನದಲ್ಲಿದ್ದವರಿಗೆಲ್ಲ ಕೈ ಮುಗಿಯುತ್ತಿದ್ದರೆ, ಬೀಗನಾದ ಮಂಗೈ ಮೇಸ್ತ್ರಿ ದೂರದಲ್ಲಿ ನಿಂತು ಎಲ್ಲರನ್ನೂ ದುರುಗುಟ್ಟಿ ನೋಡುತ್ತ ಅಕ್ಕಪಕ್ಕ ನಿಂತ ಆಳುಗಳ ಕಿವಿಯಲ್ಲಿ ಈ ಸ್ಮಶಾನವು

